ಏನೋ ಯೋಚಿಸುತ್ತಿದ್ದರು. ನಾನು ಮತ್ತೆ ಮಾತನಾಡಿಸಲು ಹೋಗಲಿಲ್ಲ.

ಮಾರನೇ ದಿನ ಬೆಳಿಗ್ಗೆ ಮಾಮೂಲಿನಂತೆ ನನ್ನ ಕೆಲಸ ಕಾರ್ಯಗಳಲ್ಲಿ ತೊಡಗಿದೆ. ಅನಿಲ್ ಆಫೀಸಿಗೆ ಹೋಗಲು ತಯಾರಾಗುತ್ತಿದ್ದರು. ಬಹಳ ದಿನಗಳ ಮೇಲೆ ಕೆಲಸಕ್ಕೆ ಹೋಗುತ್ತಿದ್ದಾರೆ ಎಂದು ನನಗೆ ಸ್ವಲ್ಪ ಸಮಾಧಾನವಾಯಿತು. ಅವರಿಗೆ ತಿಂಡಿಕೊಟ್ಟು, ಡಬ್ಬಿಯಲ್ಲಿ ಮಧ್ಯಾಹ್ನದ ಊಟ ಕಟ್ಟಿಕೊಟ್ಟೆ. ಅವರು ಕಚೇರಿಗೆ ಹೋದ ನಂತರ, ಮಗು ಅಜಯ್ ತನ್ನ ಆಟದಲ್ಲಿ ಮಗ್ನನಾಗಿದ್ದಾಗ ನಾನು ಕೆಲಸ ಮುಗಿಸಿ ಪ್ರಾರ್ಥನೆಗೆ ಕುಳಿತೆ. ಅದಕ್ಕೆ ಮುಂಚೆ ಶ್ರೀಮಾತೆಯವರನ್ನು ನೋಡಬೇಕೆಂದೆನಿಸಿ, ಜ್ಯಾಮಿಟ್ರಿ ಬಾಕ್ಸ್ ತೆಗೆದೆ. ಅದರಿಂದ ಒಂದು ಚೀಟಿ ಕೆಳಗೆ ಬಿದ್ದಿತು. ಏನಿರಬಹುದೆಂದು ಆಶ್ಚರ್ಯದಿಂದ ನೋಡಿದೆ. ಅದು ಅನಿಲ್ ನನಗೆ ಬರೆದ ಪತ್ರವಾಗಿತ್ತು. ಅದರ ಒಕ್ಕಣೆ ಓದಿ ನನ್ನನ್ನು ನಾನೇ ನಂಬಲಾಗಲಿಲ್ಲ. ಅದರಲ್ಲಿ ಹೀಗೆ ಬರೆದಿತ್ತು:

**ನನ್ನ ನೆಚ್ಚಿನ ಶಾಂತಿ,**

ನನ್ನನ್ನು ನೀನು ಶಾಲೆಗೆ ಕರೆದೊಯ್ದು ಮಹದುಪಕಾರ ಮಾಡಿದೆ. ಅಲ್ಲಿ ಸ್ವಾಮೀಜಿಯವರು ಮಾಡಿದ ಪ್ರವಚನಗಳನ್ನು ಕೇಳಿ, ನನ್ನ ಕಣ್ಣು ತೆರೆದವು. ನನ್ನ ಸ್ವಾರ್ಥದ ಸಂತೋಷಕ್ಕಾಗಿ ನನ್ನ ಸಂಸಾರವನ್ನು ಹೇಗೆ ಹಿಂಸಿಸುತ್ತಿದ್ದೇನೆ ಎಂದು ಅರಿವಾಗಿ ಅತೀವ ದುಃಖವಾಗಿದೆ. ಒಂದು ಸಂಜೆ ನನ್ನ ಸ್ನೇಹಿತನೊಬ್ಬನು ನನ್ನನ್ನು ತನ್ನ ಕೆಲಸದಲ್ಲಾದ ಬಡ್ತಿಯನ್ನು ಆಚರಿಸಲು ಒಂದು ಹೋಟೆಲ್‌ಗೆ ಕರೆದೊಯ್ದು, ಅಲ್ಲಿ ಕುಡಿಯಲು ಬಲವಂತ ಮಾಡಿದ. ಮೊದಮೊದಲು ಒಪ್ಪದಿದ್ದರೂ, ಒಂದು ದಿನ ಕುಡಿಯುವುದರಿಂದ ಏನೂ ಆಗುವುದಿಲ್ಲವೆಂದು ಬಲವಂತದಿಂದ ಕುಡಿಸಿದ. ಅದು ನನ್ನ ದೊಡ್ಡ ತಪ್ಪಾಗಿತ್ತು. ಅಂದಿನಿಂದ ಪ್ರತಿದಿನ ಸಂಜೆ ಇಬ್ಬರೂ ಅಲ್ಲಿಗೇ ಹೋಗಿ ಕುಡಿಯಲಾರಂಭಿಸಿದೆವು. ಅದು ನನಗೆ ಅಭ್ಯಾಸ ವಾಗಿ ಹೋಯಿತು.

ನೀನು ಪಡುತ್ತಿದ್ದ ಕಷ್ಟಗಳನ್ನೆಲ್ಲಾ ನಾನು ನೋಡುತ್ತಿದ್ದೆ. ಪ್ರತಿ ರಾತ್ರಿ ನನಗೆ ನಾನೇ ಪ್ರತಿಜ್ಞೆ ಮಾಡಿಕೊಳ್ಳುತ್ತಿದ್ದೆ, "ಇಂದೇ ಕೊನೆಯ ದಿನ, ಇನ್ನು ಮೇಲೆ ಕುಡಿಯುವುದಿಲ್ಲ" ಎಂದು. ಆದರೆ ಸಂಜೆಯಾದರೆ ಮತ್ತೆ ದುರ್ಬಲನಾಗಿ ಬಿಡುತ್ತಿದ್ದೆ, ಅವನೊಡನೆ ಓಡುತ್ತಿದ್ದೆ. ಕುಡಿತ ಜಾಸ್ತಿಯಾದಂತೆಲ್ಲಾ ನಿನ್ನನ್ನೂ, ಮಗುವನ್ನೂ ನಿರ್ಲಕ್ಷಿಸಿದೆ. ಆದರೆ, ನೀನು ತಾಳ್ಮೆ, ಸಹನೆಗಳ ಮೂರ್ತಿಯಾಗಿದ್ದೆ. ಹಾಗಿದ್ದರೂ, ನಾನು ಬದಲಾವಣೆ ಹೊಂದಲಿಲ್ಲ.

ಆದರೆ ನಿನ್ನೆ ನಿಮ್ಮ ಸ್ಕೂಲಿನಲ್ಲಿ ಸ್ವಾಮೀಜಿಯವರು ಹೇಳಿದ ಮಾತುಗಳು ನನ್ನನ್ನು ಚಾವಟಿಯಂತೆ ಹೊಡೆಯುತ್ತಿದ್ದವು. ಅದರಲ್ಲೂ, **"ಯಾರು ತಮ್ಮ ಕುಟುಂಬವನ್ನೂ, ಸಮಾಜವನ್ನೂ ಕಡೆಗಾಣಿಸುತ್ತಾರೋ ಅವರು ದೇವರಿಗೂ ಸೇವೆ ಸಲ್ಲಿಸುತ್ತಿಲ್ಲ, ಸಮಾಜಕ್ಕೂ ಸೇವೆ ಸಲ್ಲಿಸುತ್ತಿಲ್ಲ"** ಎಂಬ ಮಾತುಗಳು ನನ್ನನ್ನು ರಾತ್ರಿಯೆಲ್ಲಾ ಈಟಿಯಂತೆ ಚುಚ್ಚುತ್ತಿದ್ದವು. ಸರಳವಾದ, ಶಾಂತವಾದ ಮಗು ಅಜಯ್‌ನ ಮುಖದತ್ತ ನೋಡಿದೆ. ಪಾಪ, ಈ ಮಗುವಿಗೆ ಎಷ್ಟು ದ್ರೋಹ ಮಾಡುತ್ತಿದ್ದೇನೆ ಎನ್ನಿಸಿತು. ಅಜಯ್ ಮತ್ತು ನೀನು – ಇಬ್ಬರೂ ನನಗೆ ಸೇರಿದವರು. ನಿಮ್ಮನ್ನು ನೋಡಿಕೊಳ್ಳದಿದ್ದರೆ ದೇವರು ನನ್ನನ್ನು ಕ್ಷಮಿಸಲಾರ. ನಾನು ನಿನಗೆ ಭಾಷೆ ಕೊಡುತ್ತೇನೆ, ಇಂದಿನಿಂದ ನಾನು ನಿನ್ನ 'ಹಳೆಯ ಅನಿಲ್' ಆಗುತ್ತೇನೆ. ದಯವಿಟ್ಟು ನನ್ನನ್ನು ಕ್ಷಮಿಸಿಬಿಡು. ನನಗೆ ಗೊತ್ತು, ನೀನು ಪ್ರತಿದಿನ ಶ್ರೀಮಾತೆ ಶಾರದಾದೇವಿಯವರಲ್ಲಿ ಪ್ರಾರ್ಥಿಸಿಕೊಳ್ಳುತ್ತಿರುವೆ ಎಂದು. ಆ ನನ್ನೆಲ್ಲಾ ಪಾಪಗಳನ್ನು ಕ್ಷಮಿಸಿ, ಆಶೀರ್ವದಿಸುವಂತೆ ಆ ಮಹಾತಾಯಿಯನ್ನು ನನ್ನ ಪರವಾಗಿ ದಯವಿಟ್ಟು ಪ್ರಾರ್ಥಿಸಿಕೊ.

**ನಿನ್ನ ಪ್ರೀತಿಯ**
**ಅನಿಲ್**

ನನಗೆ ಈ ಪತ್ರ ಓದಿ ಹೇಗೆ ಅನಿಸಿತೆಂದು ವರ್ಣಿಸಬೇಕಾಗಿಲ್ಲ. ನನ್ನ ಜ್ಯಾಮಿಟ್ರಿ ಬಾಕ್ಸ್‌ನಲ್ಲಿದ್ದ ಶ್ರೀಮಾತೆಯವರತ್ತ ಪ್ರೀತಿಯಿಂದ ನೋಡಿದೆ. ಅವರೂ ಈ ಪತ್ರವನ್ನು ನೋಡಿದವರಂತಿತ್ತು; ನನ್ನತ್ತ ಕರುಣೆಯ ದೃಷ್ಟಿ ಬೀರುತ್ತಿರುವಂತಿತ್ತು. ನನ್ನ ಸಂತೋಷದ ಕಣ್ಣೀರಿನ ಹನಿಗಳು ಶ್ರೀಮಾತೆಯವರ ಪಾದದ ಮೇಲೆ ತೊಟ್ಟಿಕ್ಕಿದವು. ನಿಜವಾಗಿಯೂ ಅಂದಿನಿಂದ ಅನಿಲ್ ಬದಲಾವಣೆಯಾದರು. ನಮ್ಮಿಬ್ಬರನ್ನೂ ಪ್ರೀತಿಯಿಂದ ನೋಡಿಕೊಳ್ಳಲಾರಂಭಿಸಿದರು. ಕುಡಿತವನ್ನು ಸಂಪೂರ್ಣವಾಗಿ ಬಿಟ್ಟುಬಿಟ್ಟರು.

ಈ ಘಟನೆಯ ನಂತರ ನಮ್ಮ ಸುತ್ತಮುತ್ತಲಿನ ಮನೆಗಳಲ್ಲಿ ಇಂತಹ ಪರಿಸ್ಥಿತಿಯಲ್ಲಿರುವ ಹೆಂಗಸರಿಗೆ ನಾನು ಸಹಾಯ ಮಾಡಲಾರಂಭಿಸಿದೆ. ನಾನು ಅವರಿಗೆ ನನ್ನ ಕಥೆಯನ್ನೇ ಹೇಳಿ ತಾಳ್ಮೆ, ನಂಬಿಕೆಯಿಂದ ಶ್ರೀಮಾತೆಯವರಲ್ಲಿ ಮೊರೆಯಿಡಲು ತಿಳಿಸತೊಡಗಿದೆ. ಏಕೆಂದರೆ, ಪ್ರಾಮಾಣಿಕವಾಗಿ ಶ್ರೀಮಾತೆಯವರಲ್ಲಿ ಮಾಡಿದ ಪ್ರಾರ್ಥನೆ ಖಂಡಿತ ಫಲ ಕೊಡುತ್ತದೆ. ಅದಕ್ಕೆ ನನ್ನ ಜೀವನವೇ ಉದಾಹರಣೆ ಎಂದು ಘಂಟಾಘೋಷವಾಗಿ ಹೇಳುತ್ತೇನೆ.

ಅಜಯ್ ಶಾಲೆಗೆ ಹೋಗುವ ವಯಸ್ಸಿನ ತನಕ ಬೆಳೆದು ನಿಂತಿದ್ದಾನೆ. ಆದುದರಿಂದ ನನಗೆ ಹೆಚ್ಚು ಸಮಯ ದೊರೆಯುತ್ತಿದೆ. ನಾನು ಅಕ್ಕಪಕ್ಕದವರಿಗೆಲ್ಲಾ ಶ್ರೀಮಾತೆಯವರ ಜೀವನದ ಬಗ್ಗೆ ತಿಳಿಸಿ ಹೇಳುತ್ತೇನೆ. ಅದೇ ಈಗ ಬೆಳೆದು, ನಮ್ಮದೇ ಆದ ಒಂದು ಸಣ್ಣ ಗುಂಪಾಗಿದೆ. ಪ್ರತಿ ಶನಿವಾರ ಸಂಜೆ ನಾವೆಲ್ಲಾ ಸೇರಿ ಶ್ರೀಮಾತೆಯವರ ಬಗ್ಗೆ ಪುಸ್ತಕಗಳಿಂದ ಓದುತ್ತೇವೆ. ನನ್ನನ್ನು ಎಲ್ಲರೂ 'ಮಧುವಾಣಿ' ಅಂದರೆ 'ಪ್ರೀತಿಯ ದನಿಯುಳ್ಳವಳು' ಎಂದು ಕರೆಯುತ್ತಾರೆ. ಆದರೆ ನಾನೊಬ್ಬಳು ಗುಡ್ಡಗಾಡಿನ ಸಾಮಾನ್ಯ ಗ್ರಾಮೀಣ ಮಹಿಳೆ. ನನ್ನಲ್ಲಿರುವುದು ಎರಡೇ ಕಥೆಗಳು – 'ಒಂದು ನನ್ನ ಆತ್ಮಕಥೆ' ಮತ್ತೊಂದು 'ಶ್ರೀಮಾತೆಯ ಕಥೆ.' ❋

**ಹೆದರಬೇಡ, ಮನುಷ್ಯಜನ್ಮವಿಡೀ ದುಃಖದಿಂದ ಕೂಡಿದೆ. ಪ್ರತಿಯೊಂದನ್ನೂ ತಾಳ್ಮೆಯಿಂದ, ಭಗವಂತನ ನಾಮಸ್ಮರಣೆ ಮಾಡುತ್ತ ಸಹಿಸಿಕೊಂಡು ಹೋಗಬೇಕು. ದೇಹ, ಮನಸ್ಸುಗಳ ದುಃಖವನ್ನು ಯಾರೊಬ್ಬನೂ ತಪ್ಪಿಸಿಕೊಳ್ಳಲಾರನು. ಜೀವನದಲ್ಲಿ ಅಪಾಯ ಮತ್ತು ಕಷ್ಟ ಬರುವುದಿಲ್ಲವೆಂದು ತಿಳಿಯುವುದು ಮೂರ್ಖತನ. ಅವು ಬಂದೇ ಬರುವುವು. ಆದರೆ ಅವು ಭಕ್ತನ ಕಾಲ ಕೆಳಗೆ, ನೀರು ಹರಿದುಹೋಗುವಂತೆ ಬಂದು ಹೋಗುವವು... ಭಗವಂತನಲ್ಲಿ ಶರಣಾಗಿ. ಆಗ ಅವನ ದಯೆ ನಿಮಗೆ ಅರಿವಾಗುವುದು.** – *ಶ್ರೀಮಾತೆ ಶಾರದಾದೇವಿ*

# ಜ್ಞಾನದ ರೀತಿ

ಡಾ. ಪಾಂಡುರಂಗ ವಿಠಲ

ನಾವು ತಿಳಿವಳಿಕೆಯನ್ನು ಬೆಳೆಸಿಕೊಳ್ಳುತ್ತ, ಅನುಭವ–ಕಲಿಕೆಗಳ ಮೂಲಕ ಮುಂದಿನ ದಿನಗಳಲ್ಲಿ ಇನ್ನಷ್ಟು ಎಚ್ಚರದಿಂದ ಇರುತ್ತೇನೆ ಎಂದು ಯಾವಾಗಲೂ ಅಂದುಕೊಳ್ಳುತ್ತೇವೆ. ಅದು ಹೇಗೆ ಸಾಧ್ಯ?

ಮಗುವಾಗಿದ್ದಾಗ 'ನಾನು' ಎಂಬ ಪ್ರಜ್ಞೆ ಮೂಡುವುದು ನಿಧಾನ. ಮೊದಲು ನಿರ್ವಿಕಾರದಿಂದ ಎಲ್ಲವನ್ನೂ ಗಮನಿಸುವ, ಸ್ವೀಕರಿಸುವ ಮಗು ಶಾಲೆಗೆ ಹೋಗುತ್ತಿದ್ದಂತೆ ಕ್ರಮೇಣ ಆಯ್ಕೆಗೆ ತೊಡಗುತ್ತದೆ. ಈ ಪ್ರಕ್ರಿಯೆ ಎಷ್ಟು ಬಲವಾಗುತ್ತದೆಂದರೆ ಮಗುವಿನ ಇಂದ್ರಿಯಾನುಭವವೇ ಆಯ್ಕೆಯ ಪರಿಮಿತಿಯಲ್ಲಿ ಕಾರ್ಯ ನಿರ್ವಹಿಸುತ್ತದೆ. ಗದ್ದಲದೊಳಗೆ ನಾವು ಇಷ್ಟಪಟ್ಟ ಧ್ವನಿಯನ್ನು ಮಾತ್ರ ಕೇಳಿಸಿಕೊಳ್ಳಬಲ್ಲೆವು. ಇದೇ ರೀತಿ ನಾವು ಇಷ್ಟಪಟ್ಟಿದ್ದನ್ನು ಮಾತ್ರ ನೋಡಬಲ್ಲೆವು. ಹೀಗೆ ಜ್ಞಾನ ಕೂಡ ಆಸಕ್ತಿಯ ಪರಿಮಿತಿಯಲ್ಲಿ ಮಾತ್ರವೇ ಸುಳಿದಾಡುವುದು. ಬಲವಂತವಾಗಿ ಓದಿ, ಪರೀಕ್ಷೆ ಮುಗಿದ ಮೇಲೆ ಒಂದೆರಡು ತಿಂಗಳಲ್ಲೇ ಅನೇಕ ವಿಷಯಗಳು ಮರೆವಿಗೆ ಸರಿದುಬಿಡುವುದು. ಹೀಗೆ ಓದಿದ್ದು ನೆನಪಿಲ್ಲವಾದರೂ ಪದವಿಗಳ ಪಟ್ಟಿಯು ತಲೆ ತಿರುಗಿಸುವ ಅಹಂಕಾರವನ್ನು ಮಾತ್ರ ತಪ್ಪದೆ ಉಂಟು ಮಾಡುತ್ತದೆ. ಜ್ಞಾನಕ್ಕೆ ಪರಿಮಿತಿ ಇದೆ; ಅಹಂಕಾರಕ್ಕೆ ಇಲ್ಲ.

ಸರಳ ಸಂತರಾಗಿದ್ದ ಪುತ್ತೂರು ಅಜ್ಜ ಇಂದಿನ ಬುತ್ತಿಯ ಮೂಲಕ ನಾಳೆ ಗಟ್ಟಿಗೊಳ್ಳುತ್ತೇನೆ ಎಂಬ ನಂಬಿಕೆಯ ಬಗ್ಗೆ ಸಂದೇಹ ಪಡುತ್ತಿದ್ದರು. ನಿನ್ನೆ ಚಪ್ಪರಿಸಿ ತಿಂದ ಆಹಾರ ಇಂದು ಮಲವೇ ಅಲ್ಲವೇ? ನಿನ್ನೆ ತಿಂದಿದ್ದರ ಲಕ್ಷಣ ತೋರಿದರೂ ಅದನ್ನು ಮೆಚ್ಚಲು ಸಾಧ್ಯವೇ? ದೇಹಕ್ಕೆ ಒಗ್ಗದಿರುವುದು ವಾತ ಪಿತ್ತ ಕಫ ಅಂತ ಗೊತ್ತಾಗುತ್ತದೆ. ಬೇಡವಾದದ್ದು ಹೊರಗೆ ಹೋಗುತ್ತದೆ. ಬೇಕಾದದ್ದು ದೇಹಕ್ಕೆ ಸೂಕ್ಷ್ಮವಾಗಿ ಸೇರುವುದು ಗೊತ್ತೇ ಆಗುವುದಿಲ್ಲ. ಜ್ಞಾನದ ಕಷ್ಟವೂ ಇದೇ ಎನ್ನುತ್ತಿದ್ದರು ಅವರು.

ಅಹಂಕಾರದ ರೋಗಕ್ಕೆ ಕಾರಣವಾಗದ, ನಮ್ಮ ಕಲಿಕೆಯಲ್ಲಿ ರಕ್ತಗತವಾಗುವ ಜ್ಞಾನ ಅದೆಷ್ಟು? ಈ ಬಗೆಗೆ ಯಾರೂ ಯೋಚನೆ ಮಾಡಿದಂತೆ ತೋರುವುದಿಲ್ಲ. ಆಧ್ಯಾತ್ಮಿಕತೆಯತ್ತ ಈಗ ಆಕರ್ಷಿತರಾಗುತ್ತಿರುವವರ ಸಂಖ್ಯೆ ಬಹಳ ಕಡಮೆ. ಉದ್ಯೋಗ ನೀಡುತ್ತದೆಂದು ಓದುವುದು ಸಾಮಾನ್ಯ. ಈ ಬಗೆಯ ಓದು ಯಾಂತ್ರಿಕ ಹಾಗೂ ನೀರಸ. ಇನ್ನೊಂದು ವರ್ಗದ ಜ್ಞಾನವೆಂದರೆ ಮಾಧ್ಯಮಗಳಿಂದ ಗಳಿಸುವ ಮಾಹಿತಿಗಳು. ಈಗ ಟಿ.ವಿ., ಸಿನಿಮಾ, ಇಂಟರ್‌ನೆಟ್ ಮೊದಲಾದ ಸಮೂಹ ಮಾಧ್ಯಮಗಳಿಂದ ಸುಲಭವಾಗಿ ಅಂತಹ ಅನಗತ್ಯ, ಅನುಪಯುಕ್ತ, ಬಹುತೇಕ ಕೆಡುಕನ್ನೇ ಉಂಟು ಮಾಡುವ ಮಾಹಿತಿಗಳು ಯುವಕರ ವ್ಯಕ್ತಿತ್ವದೊಳಗೇ ಇಳಿಯುತ್ತ, ನವಪೀಳಿಗೆಯನ್ನು ಹಾಳುಗೆಡವುತ್ತಿವೆ.

ಉದ್ಯೋಗಕ್ಕಾಗಿನ ಓದನ್ನೇ ಜ್ಞಾನವೆಂದು ಭ್ರಮಿಸಿರುವುದೇ, ಅದು ಸಂಪತ್ತಿನಂತೆ ಕ್ರಮೇಣ ಶೇಖರವಾಗುತ್ತಾ ಹೋಗುತ್ತದೆ ಎಂಬ ಅನಿಸಿಕೆಗೆ ಕಾರಣ. ಶಾಲಾ ಕಾಲೇಜುಗಳೂ, ಟ್ಯೂಷನ್ನಿನ ಶಿಕ್ಷಕರೂ ವಿದ್ಯಾರ್ಥಿಗಳ ತಲೆಯಲ್ಲಿ ಬ್ಯಾಂಕ್ ಡಿಪಾಸಿಟ್ ತರಹ ಮಾಹಿತಿಜ್ಞಾನದ ಮಹಾಪೂರವನ್ನೇ ಇಡುತ್ತಾರೆ. ಅವನ್ನು ವಿದ್ಯಾರ್ಥಿಗಳು ಉಪಯೋಗಿಸುವುದು ಪರೀಕ್ಷೆಯಲ್ಲಿ ಮಾತ್ರ. ಹೀಗಾಗಿ ಪರೀಕ್ಷೆಯಲ್ಲಿ ಅಂಕಗಳಿಕೆಗಾಗಿ ಕಲೆಹಾಕುವ ಮಾಹಿತಿಯೇ ಶಿಕ್ಷಣವಾಗಿಬಿಟ್ಟಿದೆ. ಪರೀಕ್ಷೆಯಲ್ಲಿ ಈ ಮಾಹಿತಿಯ ಡಿಪಾಸಿಟ್ಟನ್ನು ಚೆನ್ನಾಗಿ ತೆಗೆದು ನೀಡುವವನೇ 'ಪ್ರತಿಭಾವಂತ' ನೆನ್ನಿಸಿಕೊಳ್ಳುತ್ತಾನೆ. ಕ್ರಮೇಣ ಸಂಗ್ರಹವಾಗುವ, ಕೆಲಕಾಲದ ಅನಂತರ ಕ್ರಮೇಣ ಮರೆತುಹೋಗುವ ಇಂತಹ ಮಾಹಿತಿಯು ನಿಜವಾಗಿ 'ಜ್ಞಾನ' ಅನ್ನಿಸಿಕೊಳ್ಳಬಲ್ಲುದೆ ?

ಜ್ಞಾನವು ಭೂತಕಾಲ, ಭವಿಷ್ಯತ್ ಕಾಲದಲ್ಲಿ ಇರುವಂಥದ್ದಲ್ಲ. ಕೇವಲ ವರ್ತಮಾನದಲ್ಲಿ ಮಾತ್ರವೇ ಇರುವಂತಹದು. ಅನುಕೂಲಕ್ಕೆ ತಕ್ಕ ಹಾಗೆ ಬರುವ ನೆನಪು, ಕೈಯಲ್ಲಿರುವ ಕೆಲಸ ಮಾಡಿಕೊಡಲು ಮಾತ್ರ ಸಹಾಯವಾಗುತ್ತದೆ.

ಜ್ಞಾನ ಎಂದರೆ ಅರಿವು, ಪ್ರಜ್ಞೆ, ಇದು ಏನೆಂಬುದನ್ನು ತಿಳಿಯಲು ಸಾಧ್ಯವಾದರೆ ವರ್ತಮಾನದಲ್ಲಿ ಮಾತ್ರವೇ ಅನುಭವಕ್ಕೆ ಬರುವ ಗ್ರಹಿಕೆಯಾಗುತ್ತದೆ. ಜೀವನದ ಹೋರಾಟದಲ್ಲಿ ವಿಶಿಷ್ಟ ಶಕ್ತಿಗಳನ್ನು ಪಡೆದು, ಅಚ್ಚರಿ ಮೂಡಿಸುವ ಹಲವಾರು ಜೀವಿ ಸಂಕುಲಗಳಿವೆ. ದಿಕ್ಕನ್ನು ಕತ್ತಲಲ್ಲೂ ಗುರುತಿಸಬಲ್ಲ ಪಕ್ಷಿಗಳು, ಸಹಸ್ರಾರು ಮೈಲು ದೂರದ ತನ್ನ ತವರಿಗೆ ದಾರಿತಪ್ಪದೆ ಹೋಗಿ ಮೊಟ್ಟೆಯಿಡುವ ಸಾಲ್ಮನ್ ಮೀನು, ಸಹಸ್ರಾರು ಪೆಂಗ್ವಿನ್‌ಗಳ ಗುಂಪಿನಲ್ಲಿ ತನ್ನ ಮರಿಯನ್ನು ಗುರುತಿಸಿ ಗುಟುಕು ಕೊಡುವ ತಾಯಿ ಪೆಂಗ್ವಿನ್ – ಇವುಗಳ ಹುಟ್ಟಿನಿಂದಲೇ ಅಂಥ ಜ್ಞಾನ ಬಂದಿದೆ; ಜೀನ್‌ಗಳಲ್ಲೇ ನೆಲೆಯಾಗಿದೆ. ತಿಳಿಯುವವನು, ತಿಳಿಯಲ್ಪಡುವುದು, ತಿಳಿವು – ಈ ಮೂರೂ ಇಲ್ಲದ ತ್ರಿಪುಟಿ ರಹಿತವಾದ ವೇದಾಂತದ ಜ್ಞಾನವನ್ನು ಈ ಹುಟ್ಟರಿವಿನೊಡನೆ ಹೋಲಿಸಬಹುದು.

ಸ್ವಾಮಿ ವಿವೇಕಾನಂದರು ಶಿಕ್ಷಣವೆಂದರೆ ಮನುಷ್ಯನಲ್ಲಿ ಈಗಾಗಲೇ ಇರುವ ಪರಿಪೂರ್ಣತೆಯನ್ನು ಅಭಿವ್ಯಕ್ತಿಗೊಳಿಸುವುದು ಎನ್ನುತ್ತಾರೆ. "ಪುನಃ ಶಿಕ್ಷಣ ಹೊಂದುವಂತಹ ಸಂದರ್ಭ ಬಂದರೆ ಮೊದಲು ನಾನು ಏಕಾಗ್ರತೆಯ ಅಭ್ಯಾಸ ಮಾಡುತ್ತೇನೆ" ಎಂದೂ ಹೇಳುತ್ತಾರೆ.

ಪ್ರಶ್ನೆಗಳು ಮತ್ತು ಸಮಸ್ಯೆಗಳಿಗೆ ಸಿಗುವ ಪರಿಹಾರ ಜ್ಞಾನವಲ್ಲವೆ? ಯಾವುದೇ ಸಮಸ್ಯೆ ತನ್ನ ಅಸ್ತಿತ್ವವನ್ನೇ ಅಲುಗಾಡಿಸುವಂತಹ ರೀತಿಯಲ್ಲಿದ್ದಾಗ ಪರಿಹಾರ ತನ್ನೊಳಗೇ ಸಿಕ್ಕುತ್ತದೆ. ಹೊರಗಿನಿಂದ ಸಿಗುವ ಪರಿಹಾರ ತಾತ್ಕಾಲಿಕವಾದುವು; ಮತ್ತೆ ಮತ್ತೆ ಪ್ರಶ್ನೆಗಳು, ಸಮಸ್ಯೆ ಹುಟ್ಟುವ ತನಕ ಮಾತ್ರ ಸರಿ ಎನಿಸುವಂತಹದು. ತನ್ನೊಳಗೆ ಅರಿವು ಉಂಟಾಗುವಾಗಿನ ಅನುಭವವನ್ನು ಡಿ.ವಿ.ಜಿ. ಹೀಗೆ ವಿವರಿಸುತ್ತಾರೆ:

**ಕ್ಷಣವದೊಂದೆ ಅನಂತಕಾಲ ತಾನಾಗುವುದು**
**ಅನುಭವಕೆ ಸತ್ತ್ವ ಶಿವ ಸುಂದರಗಳ ಮರೆ ।**
**ಮನ ತುಂಬು ಶಶಿಯಾಗಿ, ನೆನಪಮೃತವಾಗುವುದು**
**ಕ್ಷಣದೊಳಕ್ಷಯ ಕಾಣೊ ಮಂಕುತಿಮ್ಮ ॥**

# ಶ್ರೀಮಾತೆಯವರ ಪತ್ರಗಳು

ಪ್ರವ್ರಾಜಿಕಾ ಧರ್ಮಪ್ರಾಣಾ




**ಶ್ರೀಮಾತೆಯವರು ದೂರದೂರದಲ್ಲಿದ್ದ ತಮ್ಮ ಶಿಷ್ಯಸಂತಾನಕ್ಕೆ ಆಶೀರ್ವಾದ ಪೂರ್ವಕವಾಗಿ ಅನೇಕ ಪತ್ರಗಳನ್ನು ಹೇಳಿ ಬರೆಸಿದ್ದಾರೆ. ಅವುಗಳಲ್ಲೆಲ್ಲ ಅವರ ಮಾತೃವಾತ್ಸಲ್ಯ, ಅನುಕಂಪ ಮತ್ತು ಅನುಗ್ರಹಗಳ ಅಮೃತ ಸಿಂಚನವನ್ನು ಕಾಣಬಹುದು. ಈ ಪತ್ರಗಳ ಬಗ್ಗೆ ನಮಗೆ ಉಪಯುಕ್ತ ಮಾಹಿತಿಯನ್ನು ನೀಡಿರುವ ಪೂಜ್ಯ ಮಾತಾಜಿಯವರು ಅರುಣಾಚಲ ಪ್ರದೇಶದ ಖೋನ್ಸಾ ಎಂಬಲ್ಲಿನ ಶ್ರೀ ಶಾರದಾ ಮಠದ ಶಾಖೆಯಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಇವರ ಹಲವು ಲೇಖನಗಳು ಈ ಪತ್ರಿಕೆಯಲ್ಲಿ ಈಗಾಗಲೇ ಪ್ರಕಟವಾಗಿವೆ.**

ಶ್ರೀಮಾತೆಯವರು ಜನಿಸಿದ್ದು ಒಂದು ಹಳ್ಳಿಯಲ್ಲಿ. ಹೀಗಾಗಿ ಆಗಿನ ಸಂಪ್ರದಾಯದ ಪ್ರಕಾರ ಬೇರೆ ಎಲ್ಲಾ ಹೆಣ್ಣುಮಕ್ಕಳಂತೆ ವಿದ್ಯಾಭ್ಯಾಸದ ಅವಕಾಶ ಅವರಿಗೂ ಸಿಕ್ಕಲಿಲ್ಲ. ಆದರೆ ಅವರಿಗೆ ಓದು ಬರಹದಲ್ಲಿ ತುಂಬ ಉತ್ಸಾಹವಿತ್ತು. ತಮ್ಮ ಸಹೋದರರು ಪಾಠಶಾಲೆಯಿಂದ ಮರಳಿ ಮನೆಗೆ ಬಂದಾಗ ಅವರಿಂದ ಓದಲು ಕಲಿಯುತ್ತಿದ್ದರು. ಆಮೇಲೆ ವಿವಾಹದ ನಂತರ ಕಾಮಾರಪುಕುರದಲ್ಲಿರುವಾಗ ಶ್ರೀರಾಮಕೃಷ್ಣರ ಅಣ್ಣನ ಮಗಳು ಲಕ್ಷ್ಮಿಯ ಜೊತೆ ಸೇರಿ ಪುನಃ ಓದಲು ಕಲಿಯತೊಡಗಿದರು. ಆಮೇಲೆ ದಕ್ಷಿಣೇಶ್ವರಕ್ಕೆ ತಲುಪಿದಾಗ ಇವರಿಬ್ಬರಿಗೂ ಶ್ರೀರಾಮಕೃಷ್ಣರು ಪ್ರೋತ್ಸಾಹವನ್ನು ನೀಡಿ, ರಾಮಾಯಣ, ಮಹಾಭಾರತಗಳನ್ನು ಓದಲು, ಕಲಿಸಲು ಒಬ್ಬ ಹುಡುಗನನ್ನು ನಿಯಮಿಸಿದ್ದರು. ಹೀಗೆ ಶ್ರೀಮಾತೆ ಓದಲು ಕಲಿತರೂ, ಬರೆಯಲು ಕಲಿತಿರಲಿಲ್ಲ. ಶ್ರೀರಾಮಕೃಷ್ಣರ ಮಹಾಸಮಾಧಿಯ ನಂತರ ಅವರ ಅವತಾರದ ಉದ್ದೇಶವನ್ನು ಶ್ರೀಮಾತೆ ಮುಂದುವರಿಸುತ್ತಿರುವಾಗ ಅವರ ಬಳಿ ಅನೇಕ ಭಕ್ತರು ಬರತೊಡಗಿದರು. ಅಂಥ ಭಕ್ತರು ಅನೇಕ ಪತ್ರಗಳನ್ನು ಬರೆಯುತ್ತಿದ್ದರು. ಪ್ರತಿಯೊಂದು ಪತ್ರಕ್ಕೂ ಶ್ರೀಮಾತೆ ಉತ್ತರವನ್ನು ಬರೆಸಿ ಕಳುಹಿಸುತ್ತಿದ್ದರು. ಸಂನ್ಯಾಸಿವೃಂದದವರಿಗೂ, ಗೃಹಸ್ಥಭಕ್ತರಿಗೂ ಸೇರಿ ಸುಮಾರು ೪೦೦ಕ್ಕಿಂತ ಹೆಚ್ಚು ಪತ್ರಗಳನ್ನು ಶ್ರೀಮಾತೆ ಹೇಳಿಬರೆಸಿದ್ದಾರೆ. ಬರೆಯುವವರು ಅವರು ಹೇಗೆ ಹೇಳುವರೋ ಹಾಗೆಯೇ ಬರೆದಿರುವುದರಲ್ಲಿ ಸಂಶಯವಿಲ್ಲ. ಆದುದರಿಂದ, ಆ ಪತ್ರಗಳಲ್ಲಿನ ಮಾತುಗಳು ಶ್ರೀಮಾತೆಯವರದೇ ಆಗಿವೆ ಎನ್ನುವುದರಲ್ಲಿ ಯಾವ ಸಂದೇಹವೂ ಇಲ್ಲ. ಜಯರಾಂಬಾಟಿಯಲ್ಲಿರುವಾಗ ಅಂಚೆಯವನು ಪತ್ರಗಳನ್ನು ತಂದರೆ, ಅವನಿಂದಲೇ ಓದಿಸಿ, ಅವನಿಂದಲೇ ಉತ್ತರವನ್ನು ಬರೆಸುತ್ತಿದ್ದರು. ರಾಧೆ, ಮಾಕು, ನಳಿನಿ, ಬ್ರಹ್ಮಚಾರಿಗಳು, ಸಂನ್ಯಾಸಿಗಳು ಹಾಗೂ ಕೆಲವು ಭಕ್ತ ಮಹಿಳೆಯರು ಕೂಡ ಅವರ ಪತ್ರಗಳನ್ನು ಶ್ರೀಮಾತೆಯೆದುರಿಗೆ ಓದಿಹೇಳಿ, ಉತ್ತರ ಬರೆದುಕೊಡುತ್ತಿದ್ದರು. ಶ್ರೀಮಾತೆಯವರ ಭಾಷೆ ಬಂಗಾಳಿಯ ಗ್ರಾಮೀಣ ಭಾಷೆಯಾಗಿತ್ತು. ಅದೇ ಭಾಷೆಯಲ್ಲಿ ಹೇಳುತ್ತಿದ್ದರು. ಬರೆಯುವವರೂ ಹಾಗೆಯೇ ಬರೆದಿದ್ದಾರೆ. ಆದುದರಿಂದ ಪತ್ರಗಳು ಶುದ್ಧ ಸಾಹಿತ್ಯ ರೂಪದಲ್ಲಿರದಿದ್ದರೂ ಆ ಮೂಲಕ ಅವರು ತೋರಿಸಿರುವ ಸರಳತೆ, ಮಾತೃವಾತ್ಸಲ್ಯ, ಸಲಹೆಗಳು, ಮಾರ್ಗದರ್ಶನಗಳು ಅತ್ಯಂತ ಅಪೂರ್ವವಾಗಿವೆ, ನಿತ್ಯನೂತನವಾಗಿವೆ, ನಮಗೇ ಬರೆದಂತಿದೆ. ಅ ಎಲ್ಲ ಪತ್ರಗಳನ್ನು ಓದಿದರೆ ಅದೊಂದು ನೂತನ ಧರ್ಮಗ್ರಂಥವೋ ಅಥವಾ ಆಪ್ತ ಸ್ನೇಹಿತೆಯ ಸನಿಹದ ಮಾತುಗಳೋ ಎಂಬಂತಿವೆ.

ಶ್ರೀಮಾತೆಯವರು ತಮಗೆ ಬರುವ ಪತ್ರಗಳನ್ನೆಲ್ಲಾ ಬೇರೆಯವರಿಂದ ಓದಿಸಿ ಮನಸ್ಸಿಟ್ಟು ಕೇಳುವರು. ಉತ್ತರವನ್ನು ಬರೆಯುವಾಗ, **"ನನ್ನ ಮಗನೇ ಅಥವಾ ನನ್ನ ಮಗಳೇ"** ಎಂದು ಸಂಬೋಧಿಸಿ ಶುರುಮಾಡುವರು; ಪತ್ರದ ಕೊನೆಯಲ್ಲಿ, **"ಆಶೀರ್ವಾದವನ್ನು ನೀಡುವ ನಿನ್ನ ತಾಯಿ"** ಎಂದು ಬರೆಸುವರು. ಸಾಕ್ಷಾತ್ ಜಗಜ್ಜನನಿಯಾದ ಅವರ ಮಾತೃವಾತ್ಸಲ್ಯವು ಪ್ರತಿಯೊಂದು ಪತ್ರದಲ್ಲಿಯೂ ಸ್ಫುಟವಾಗಿರುವುದು. ಪತ್ರ ಯಾರನ್ನು ಉದ್ದೇಶಿಸಿದೆಯೋ, ಆ ವ್ಯಕ್ತಿಯ ಮತ್ತು ಅವರ ಜೊತೆಯಲ್ಲಿರುವವರ ಕುಶಲವನ್ನೂ ವಿಚಾರಿಸಿ ಎಲ್ಲರಿಗೂ ಆಶೀರ್ವಾದ ಮಾಡುವರು. ತಮ್ಮ ಮತ್ತು ಜೊತೆಯಲ್ಲಿರುವವರ ಕುಶಲವನ್ನು ತಿಳಿಸುವರು. ರಾಮಕೃಷ್ಣ ಮಠದ ಸಂನ್ಯಾಸಿಗಳಿಗೆ ಬರೆಯುವಾಗ, ಅವರ ಸಂನ್ಯಾಸಿ ಜೀವನಕ್ಕೂ, ಸಂಘಜೀವನಕ್ಕೂ ಬೇಕಾದ ಉಪದೇಶಗಳನ್ನು ನೀಡುವರು. ಹಿರಿಯ ಸಂನ್ಯಾಸಿಗಳಿಗೆ ಬರೆಯುವಾಗ, ಮಠದ ಕಾರ್ಯಕಲಾಪಗಳ ಬಗ್ಗೆ ವಿಚಾರಿಸುವರು; ಪ್ರೋತ್ಸಾಹಿಸಿ ಮುಖ್ಯ ಸಲಹೆಗಳನ್ನು ನೀಡುವರು. ಗೃಹಸ್ಥಭಕ್ತರ ಪತ್ರಗಳಲ್ಲಿ ಅವರ ಸಂಸಾರದ ಸುಖದುಃಖಗಳಲ್ಲಿ ತಾವೂ ಪಾಲುಗೊಂಡು, ಶಾಂತಿ, ಸಮಾಧಾನದ ಸಂದೇಶವನ್ನು ನೀಡುವರು. ಕೆಲವರಿಗೆ ಬರೆದ